**ದಿನಾಂಕಃ 09.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ಪಟ್ಟಣಗೆರೆ ಗ್ರಾಮದ ಸರ್ವೆ ನಂ.42/3 ಬಿ ಪೋಡಿ ಸರ್ವೆ ನಂ.42/3 ಬಿ1, 42/3 ಬಿ2 ಹಾಗೂ 42/3 ಬಿ3 ರ ಸ್ವತ್ತನ್ನು ಕ್ಲೇಮು ಮಾಡುತ್ತಿದ್ದೇನೆ. ನನಗೆ ಈಗ ತೋರಿಸಿದ ನಕ್ಷೆಯಲ್ಲಿ ಸರ್ವೆ ನಂ.42/3 ಬಿ ಹಾಗೂ 42/3 ಎ ಸ್ವತ್ತು ಗುರುತಾಗಿರುತ್ತದೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಆ ನಕ್ಷೆಯ ಬಗ್ಗೆ ಗೊತ್ತಿಲ್ಲ. ನಾನು ಈಗ ನೋಡುತ್ತಿರುವ ದಾಖಲೆಗಳು ನಾನು ಸಲ್ಲಿಸಿದ್ದ ಮೂಲ ದಾವೆ ಸಂ.4461/2022 ರ ದಾವೆಯಲ್ಲಿನ ಆದೇಶದ ಪುಟಗಳ, ರಾಜೀ ಅರ್ಜಿ ಹಾಗೂ ರಾಜೀ ಡಿಕ್ರಿಯ ದೃಢೀಕೃತ ನಕಲುಗಳು ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ದಾಖಲಾತಿಗಳನ್ನು ಕ್ರಮವಾಗಿ **ನಿಪಿ-41 ರಿಂದ ನಿಪಿ-43** ಎಂದು ಗುರುತಿಸಲಾಯಿತು. ನಿಪಿ-43 ರ ಅನುಸೂಚಿ-ಇ ನಲ್ಲಿ ವಿವರಿಸಿರುವ ಸ್ವತ್ತಿನ ಚೆಕ್ಕುಬಂದಿಯಲ್ಲಿ ನಮೂದಿಸಿರುವ ಹಳೆ ಸಂ.90, 87 ಹಾಗೂ 85 REMCO (BHEL) House Building Co-Operative Society ರವರು ನೀಡಿದ್ದ ನಿವೇಶನ ಸಂಖ್ಯೆಗಳು ಎಂದರೆ ಸರಿ. ಮೂಲ ದಾವೆ ಸಂ.4461/2022 ರಲ್ಲಿ ನಾನು REMCO (BHEL) House Building Co-Operative Society ರವರು ನೀಡಿದ್ದ ನಿವೇಶನ ಸಂ.86 ರ ಸ್ವತ್ತಿನ ಕ್ರಯ ಪತ್ರವನ್ನು ರದ್ದು ಪಡಿಸಲು ಕೇಳಿಕೊಂಡಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸದರಿ ನಿವೇಶನದಲ್ಲಿ ಕಟ್ಟಿದ ಮನೆಯನ್ನು ಕೆಡವಿ ಹಾಕಲು

ಸಹಾ ಕೇಳಿಕೊಂಡಿದ್ದೆನು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯ 2 ನೇ ಪ್ರತಿವಾದಿಯಿಂದ ಒತ್ತಾಯ ಪೂರ್ವಕವಾಗಿ ಹಣವನ್ನು ವಸೂಲಿ ಮಾಡಲು ಸದರಿ ದಾವೆಯನ್ನು ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ನಾನು ಸದರಿ ದಾವೆಯ 2 ನೇ ಪ್ರತಿವಾದಿಯಿಂದ ರೂ.7,30,000/- ಹಣವನ್ನು ಪಡೆದು ಹಿಂಪಡೆದಿರುತ್ತೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಹಣ ಪಡೆದಿರುವುದು ನಿಜ. ನಾನು ಸದರಿ ದಾವೆಯನ್ನು ಸದರಿ ದಾವೆಯ 2 ನೇ ಪ್ರತಿವಾದಿಯ ಮೇಲೆ ಒತ್ತಡ ಹಾಕಿ ರಾಜೀ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿನ ರಾಜೀ ಅರ್ಜಿಗೆ REMCO (BHEL) House Building Co-Operative Society ರವರು ಸಹಿ ಮಾಡಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಸಲ್ಲಿಸಿದ್ದ ರಾಜೀ ಅರ್ಜಿಯೊಂದಗಿನ ಲಗತ್ತು ನಕ್ಷೆಯಲ್ಲಿ ನಾನು REMCO (BHEL) House Building Co-Operative Society ರವರು ನೀಡಿದ್ದ ನಿವೇಶನಗಳಿಗೆ ನನ್ನ ಮನಸ್ಸಿಗೆ ಬಂದಂತೆ ಬೇರೆ ಸಂಖ್ಯೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಕ್ಷೆಯನ್ನು ನಾನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಕ್ಷೆಯನ್ನು ಸದರಿ ದಾವೆಯ 2 ನೇ ಪ್ರತಿವಾದಿ ಮಾಡಿಕೊಟ್ಟಿರುತ್ತಾರೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈಗ ನೋಡುತ್ತಿರುವ ದಾಖಲೆಗಳು ನಾನು ಸಲ್ಲಿಸಿದ್ದ ಮೂಲ ದಾವೆ ಸಂ.2788/2022 ರ ದಾವೆಯಲ್ಲಿನ ಆದೇಶದ ಪುಟಗಳ, ರಾಜೀ ಅರ್ಜಿ ಹಾಗೂ ರಾಜೀ ಡಿಕ್ರಿಯ ದೃಢೀಕೃತ ನಕಲುಗಳು ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ

ದಾಖಲಾತಿಗಳನ್ನು ಕ್ರಮವಾಗಿ **ನಿಪಿ-44 ರಿಂದ ನಿಪಿ-46** ಎಂದು ಗುರುತಿಸಲಾಯಿತು. ನಿಪಿ-46 ರ ಅನುಸೂಚಿ-ಇ ನಲ್ಲಿ ವಿವರಿಸಿರುವ ಸ್ವತ್ತಿನ ಚೆಕ್ಕುಬಂದಿಯಲ್ಲಿ ನಮೂದಿಸಿರುವ ಹಳೆ ಸಂ.89, 87/1 ಹಾಗೂ 86 REMCO (BHEL) House Building Co-Operative Society ರವರು ನೀಡಿದ್ದ ನಿವೇಶನ ಸಂಖ್ಯೆಗಳು ಎಂದರೆ ಸರಿ. ಮೂಲ ದಾವೆ ಸಂ.2788/2022 ರಲ್ಲಿ ನಾನು REMCO (BHEL) House Building Co-Operative Society ರವರು ನೀಡಿದ್ದ ನಿವೇಶನ ಸಂ.87 ರ ಸ್ವತ್ತಿನ ಕ್ರಯ ಪತ್ರವನ್ನು ರದ್ದು ಪಡಿಸಲು ಕೇಳಿಕೊಂಡಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸದರಿ ನಿವೇಶನದಲ್ಲಿ ಕಟ್ಟಿದ ಮನೆಯನ್ನು ಕೆಡವಿ ಹಾಕಲು ಸಹಾ ಕೇಳಿಕೊಂಡಿದ್ದೆನು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯ 2 ನೇ ಪ್ರತಿವಾದಿಯಿಂದ ಒತ್ತಾಯ ಪೂರ್ವಕವಾಗಿ ಹಣವನ್ನು ವಸೂಲಿ ಮಾಡಲು ಸದರಿ ದಾವೆಯನ್ನು ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ನಾನು ಸದರಿ ದಾವೆಯ 2 ನೇ ಪ್ರತಿವಾದಿಯಿಂದ ರೂ.15,00,000/- ಹಣವನ್ನು ಪಡೆದು ಹಿಂಪಡೆದಿರುತ್ತೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಹಣ ಪಡೆದಿರುವುದು ನಿಜ. ನಾನು ಸದರಿ ದಾವೆಯನ್ನು ಸದರಿ ದಾವೆಯ 2 ನೇ ಪ್ರತಿವಾದಿಯ ಮೇಲೆ ಒತ್ತಡ ಹಾಕಿ ರಾಜೀ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿನ ರಾಜೀ ಅರ್ಜಿಗೆ REMCO (BHEL) House Building Co-Operative Society ರವರು ಸಹಿ ಮಾಡಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಸಲ್ಲಿಸಿದ್ದ ರಾಜೀ ಅರ್ಜಿಯೊಂದಗಿನ ಲಗತ್ತು ನಕ್ಷೆಯಲ್ಲಿ ನಾನು REMCO (BHEL) House

Building Co-Operative Society ರವರು ನೀಡಿದ್ದ ನಿವೇಶನಗಳಿಗೆ ನನ್ನ ಮನಸ್ಸಿಗೆ ಬಂದಂತೆ ಬೇರೆ ಸಂಖ್ಯೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಕ್ಷೆಯನ್ನು ನಾನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಕ್ಷೆಯನ್ನು ಸದರಿ ದಾವೆಯ 2 ನೇ ಪ್ರತಿವಾದಿ ಮಾಡಿಕೊಟ್ಟಿರುತ್ತಾರೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈಗ ನೋಡುತ್ತಿರುವ ದಾಖಲೆಗಳು ನಾನು ಸಲ್ಲಿಸಿದ್ದ ಮೂಲ ದಾವೆ ಸಂ.4460/2022 ರ ದಾವೆಯಲ್ಲಿನ ಆದೇಶದ ಪುಟಗಳ, ರಾಜೀ ಅರ್ಜಿ ಹಾಗೂ ರಾಜೀ ಡಿಕ್ರಿಯ ದೃಢೀಕೃತ ನಕಲುಗಳು ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ದಾಖಲಾತಿಗಳನ್ನು ಕ್ರಮವಾಗಿ **ನಿಪಿ-47 ರಿಂದ ನಿಪಿ-49** ಎಂದು ಗುರುತಿಸಲಾಯಿತು. ನಿಪಿ-49 ರ ಅನುಸೂಚಿ-ಇ ನಲ್ಲಿ ವಿವರಿಸಿರುವ ಸ್ವತ್ತಿನ ಚೆಕ್ಕುಬಂದಿಯಲ್ಲಿ ನಮೂದಿಸಿರುವ ಹಳೆ ಸಂ.91, 86 ಹಾಗೂ 84 REMCO (BHEL) House Building Co-Operative Society ರವರು ನೀಡಿದ್ದ ನಿವೇಶನ ಸಂಖ್ಯೆಗಳು ಎಂದರೆ ಸರಿ. ಮೂಲ ದಾವೆ ಸಂ.4460/2022 ರಲ್ಲಿ ನಾನು REMCO (BHEL) House Building Co-Operative Society ರವರು ನೀಡಿದ್ದ ನಿವೇಶನ ಸಂ.85 ರ ಸ್ವತ್ತಿನ ಕ್ರಯ ಪತ್ರವನ್ನು ರದ್ದು ಪಡಿಸಲು ಕೇಳಿಕೊಂಡಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸದರಿ ನಿವೇಶನದಲ್ಲಿ ಕಟ್ಟಿದ ಮನೆಯನ್ನು ಕೆಡವಿ ಹಾಕಲು ಸಹಾ ಕೇಳಿಕೊಂಡಿದ್ದೆನು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯ 2 ನೇ ಪ್ರತಿವಾದಿಯಿಂದ ಒತ್ತಾಯ ಪೂರ್ವಕವಾಗಿ ಹಣವನ್ನು ವಸೂಲಿ ಮಾಡಲು ಸದರಿ

ದಾವೆಯನ್ನು ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ನಾನು ಸದರಿ ದಾವೆಯ 2 ನೇ ಪ್ರತಿವಾದಿಯಿಂದ ರೂ.7,30,000/- ಹಣವನ್ನು ಪಡೆದು ಹಿಂಪಡೆದಿರುತ್ತೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಹಣ ಪಡೆದಿರುವುದು ನಿಜ. ನಾನು ಸದರಿ ದಾವೆಯನ್ನು ಸದರಿ ದಾವೆಯ 2 ನೇ ಪ್ರತಿವಾದಿಯ ಮೇಲೆ ಒತ್ತಡ ಹಾಕಿ ರಾಜೀ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿನ ರಾಜೀ ಅರ್ಜಿಗೆ REMCO (BHEL) House Building Co-Operative Society ರವರು ಸಹಿ ಮಾಡಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಸಲ್ಲಿಸಿದ್ದ ರಾಜೀ ಅರ್ಜಿಯೊಂದಗಿನ ಲಗತ್ತು ನಕ್ಷೆಯಲ್ಲಿ ನಾನು REMCO (BHEL) House Building Co-Operative Society ರವರು ನೀಡಿದ್ದ ನಿವೇಶನಗಳಿಗೆ ನನ್ನ ಮನಸ್ಸಿಗೆ ಬಂದಂತೆ ಬೇರೆ ಸಂಖ್ಯೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಕ್ಷೆಯನ್ನು ನಾನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಕ್ಷೆಯನ್ನು ಸದರಿ ದಾವೆಯ 2 ನೇ ಪ್ರತಿವಾದಿ ಮಾಡಿಕೊಟ್ಟಿರುತ್ತಾರೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-3 ರ ಕ್ರಯ ಪತ್ರವನ್ನು ರದ್ದು ಪಡಿಸುವಂತೆ ನಾನು ಯಾವುದೇ ದಾವೆಯನ್ನು ಸಲ್ಲಿಸಿಲ್ಲ. ನಾನು ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗ ಪಡಿಸಿಕೊಂಡು ನಿವೇಶನ ಹಂಚಿಕೆ ಪಡೆದುಕೊಂಡವರಿಂದ ಹಣ ವಸೂಲಿ ಮಾಡಲು ಮೇಲೆ ಸೂಚಿಸಿದ ದಾವೆಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 13.05.2009 ರಂದು ನಾನು ಸರ್ವೆ ನಂ.42/3 ಬಿ ಯಲ್ಲಿ 6 ಗುಂಟೆ ಸ್ವತ್ತನ್ನು

ನಿಡಿ-27 ರ ಕ್ರಯ ಪತ್ರದ ಪ್ರಕಾರ ಖರೀದಿ ಮಾಡಿರುತ್ತೇನೆ ಎಂದರೆ ಸರಿ. 1990 ರಲ್ಲಿಯೇ REMCO (BHEL) House Building Co-Operative Society ರವರು ಸದರಿ ಸ್ವತ್ತಿನಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡಿದ್ದರು ಎಂದರೆ ಸರಿಯಲ್ಲ. ದಿನಾಂಕ 14.02.1995 ರಂದು ಅಧಿಸೂಚಿತ ಪ್ರದೇಶ ಸಮಿತಿ ರವರು ನಿವೇಶನ ಸಂ.84 ರ ಸ್ವತ್ತಿಗೆ ಖಾತಾ ಹಿಂಬರಹದ ದಾಖಲೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿವೇಶನ ಬಿಬಿಎಂಪಿ ವ್ಯಾಪ್ತಿಗೆ ಬಂದ ನಂತರ ದಿನಾಂಕ 05.05.2016 ರಂದು ಬಿಬಿಎಂಪಿ ರವರು ವಾದಿಯ ಹೆಸರಿಗೆ ನಿಪಿ-14 ರ ಖಾತೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 17.08.2007 ರಂದು ಬಿಬಿಎಂಪಿ ರವರು ನಿಪಿ-30 ರಂತೆ ಒಂದು ವರದಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ಸಹಾ ಅದರಲ್ಲಿ ಪಕ್ಷಗಾರನಿದ್ದೇನೆ. ಸರ್ವೆ ನಂ.42/3 ಬಿ ಸ್ವತ್ತು ಬಿಬಿಎಂಪಿ ವ್ಯಾಪ್ತಿಗೆ ಬಂದ ನಂತರವೂ ಸಹಾ ನಾನು ಅದು ಕೃಷಿ ಜಮೀನು ಎಂದು ಖರೀದಿ ಮಾಡಿರುತ್ತೇನೆ ಎಂದರೆ ಸರಿ. REMCO (BHEL) House Building Co-Operative Society ರವರು ಸದರಿ ಜಮೀನಿನಲ್ಲಿ ನಿವೇಶನಗಳನ್ನು ಮಾಡಿ ಅವುಗಳಿಗೆ ಹಂಚಿಕೆ ಪಡೆದವರು ಖಾತೆಗಳನ್ನು ಮಾಡಿಕೊಂಡು ಬಿಬಿಎಂಪಿ ತೆರಿಗೆ ಪಾವತಿಸುತ್ತಿದ್ದರೂ ಸಹಾ ಛಾಪಾ ಶುಲ್ಕವನ್ನು ಪಾವತಿಸಿರುವುದರಿಂದ ತಪ್ಪಿಸಿಕೊಳ್ಳಲು ನಾನು ಅದನ್ನು ಮರೆಮಾಚಿ ಸದರಿ ಸ್ವತ್ತು ಕೃಷಿ ಜಮೀನು ಎಂದು ಸುಳ್ಳು ಹೇಳಿ ನಿಡಿ-27 ರ ಕ್ರಯ ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ-25 ಮತ್ತು 26 ರ ಕ್ರಯ ಪತ್ರಗಳನ್ನು ಸಹಾ ಮಾಡಿಕೊಂಡಿರುತ್ತೇನೆ

ಎಂದರೆ ಸರಿಯಲ್ಲ. ಸರ್ವೆ ನಂ.42/3 ಬಿ ಜಮೀನು ಬಿಬಿಎಂಪಿ ವ್ಯಾಪ್ತಿಗೆ ಬಂದ ನಂತರ ಸದರಿ ಜಮೀನಿಗೆ ನಿಡಿ-28 ರಂತೆ ಭೂ ಪರಿವರ್ತನೆ ಆದೇಶವನ್ನು ನೀಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಬಡಾವಣೆಯನ್ನು ನಿರ್ಮಾಣ ಮಾಡಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.